ಖಿಡಕಿ ರೆಹತೀ ಥೀ.' ಇದು ನಿಮಗೆ ಕೇಂದ್ರ ಸಾಹಿತ್ಯ ಪ್ರಶಸ್ತಿಯನ್ನು ತಂದುಕೊಟ್ಟಿರುವ ಮಹತ್ವದ ಕೃತಿ. ನಿಮಗೆ ಮೊದಲು ಶೀರ್ಷಿಕೆ ಹೊಳೆಯುತ್ತದೆಯೋ ಅಥವಾ ಕೃತಿಯನ್ನು ಬರೆದು ಮುಗಿಸಿ ಶೀರ್ಷಿಕೆ ನೀಡುತ್ತೀರೋ? ಪಾತ್ರಗಳು ಮೊದಲು ಹುಟ್ಟಿಕೊಳ್ಳುತ್ತವೆಯೋ ಅಥವಾ ದೃಶ್ಯ-ಸನ್ನಿವೇಶಗಳೋ? ನಿಮ್ಮ ಬರವಣಿಗೆಗೆ ಸ್ಫೂರ್ತಿ ಯಾವುದು?

ಮೊದಲಿಗೆ ಕಥೆ-ಕಾವ್ಯಗಳ ರಚನೆ; ನಂತರ ಶೀರ್ಷಿಕೆ. ಕಥೆ-ಕಾವ್ಯ ಏನನ್ನು ಹೇಳುತ್ತಿದೆ ಎನ್ನುವುದರ ಆಧಾರದ



ಮೇಲೆ ಶೀರ್ಷಿಕೆಯನ್ನು ನೀಡುತ್ತೇನೆ. ಕೆಲವೊಮ್ಮೆ ನನ್ನ ಕಾವ್ಯಕ್ಕೆ ಶೀರ್ಷಿಕೆಯ ಅಗತ್ಯವೇ ಇರುವುದಿಲ್ಲ. ಕವನದ ಮೊದಲ ಸಾಲೇ ಶೀರ್ಷಿಕೆಯಾಗಿಬಿಟ್ಟಿರುತ್ತದೆ!

ನನ್ನ ಕಥೆ-ಕಾದಂಬರಿಗಳಲ್ಲಿ ಕಥೆಗೆ ಅನುಗುಣವಾಗಿ ಪಾತ್ರಗಳು ಸೃಷ್ಟಿಯಾಗುತ್ತವೆ. ಆಯಾ ಪಾತ್ರದ ವ್ಯಕ್ತಿತ್ವವನ್ನು ಆಧರಿಸಿ ಅವುಗಳ ಲಕ್ಷಣ, ನಡತೆ ಹಾಗೂ ವರ್ತನೆಗಳು ಅಭಿವ್ಯಕ್ತಗೊಳ್ಳುತ್ತವೆ. ಆದರೆ ಪ್ರತಿಯೊಂದು ಸನ್ನಿವೇಶ ಸೃಷ್ಟಿಸುವಾಗಲೂ ಓದುಗರೇ ನನ್ನ ಕಣ್ಣುಗಳ ಮುಂದಿರುತ್ತಾರೆ. ಸಾಹಿತ್ಯ ಪ್ರಕಾರಗಳ ಬಗ್ಗೆ ನಾನು ಅಷ್ಟಾಗಿ ಯೋಚಿಸುವುದಿಲ್ಲ. ಹೇಳಬೇಕು ಅನ್ನಿಸಿದ್ದನ್ನು ಸ್ಪಷ್ಟವಾಗಿ ಹೇಳುವ ಮಾಧ್ಯಮ ಮುಖ್ಯ. ಬಹುಶಃ ನನ್ನ ಪೂರ್ವಕಾಲೀನ ಹಾಗೂ ಸಮಕಾಲೀನ ಲೇಖಕರ ಚಿಂತನೆ ಇದೇ ಆಗಿದ್ದಿರಬಹುದು. ಕಡಿಮೆ ಶಬ್ದಗಳಲ್ಲಿ ಹೇಳಬಹುದಾದ ಮಹತ್ವದ ಸಂಗತಿಗಳಿಗೆ ಕಾವ್ಯ ಉತ್ತಮ ಸಾಧನ. ಉಪಮೆ, ಉಪಮಾನ, ಉಪಮೇಯ, ಕಲ್ಪನೆ ಇತ್ಯಾದಿಗಳ ಯೋಗ್ಯ ರೀತಿಯ ಮೇಳೈಸುವಿಕೆಯೇ ಕಾವ್ಯ. ಹೆಚ್ಚು ಪದಗಳು, ವಾಕ್ಯಗಳು ಅನಿವಾರ್ಯವಾಗುವ ಮಾಧ್ಯಮವೇ ಕಥೆ ಹಾಗೂ ಕಾದಂಬರಿ. ಆದರೆ ಯಾವುದೇ ಪ್ರಕಾರದಲ್ಲಿಯೂ ಶಬ್ದಗಳ ಬಳಕೆಯಲ್ಲಿ ಜಿಪುಣತನ ತೋರಬೇಕಾದುದು ಕಡ್ಡಾಯ. ಸಾಹಿತ್ಯ ಪ್ರಕಾರಗಳ ಬಗ್ಗೆ ಇದು ನನಗಿರುವ ಭಾವನೆ ಮತ್ತು ಸ್ಪಷ್ಟವಾದ ಅಭಿಪ್ರಾಯ.

ನನ್ನ ಬರವಣಿಗೆಗೆ ಸ್ಫೂರ್ತಿ ಕೆಲವೊಮ್ಮೆ ತಾನಾಗಿಯೇ ಸ್ಫುರಿಸುತ್ತದೆ; ಮತ್ತೆ ಕೆಲವು ಬಾರಿ ಯಾವುದಾದರೂ ಘಟನೆ ಅಥವಾ ಪರಿಕಲ್ಪನೆಗೆ ನಮಗೆ ನಾವೇ ಸ್ಫೂರ್ತಿಯನ್ನು ತುಂಬಿಕೊಳ್ಳಬೇಕಾಗುತ್ತದೆ. ಒಮ್ಮೊಮ್ಮೆ ನಾನು ಏನನ್ನು ಬರೆಯುತ್ತಿದ್ದೇನೆ ಎನ್ನುವುದು ಬರವಣಿಗೆ ಮುಗಿದ ನಂತರವೇ ಗೊತ್ತಾಗುತ್ತದೆ. ಒಂದಕ್ಕೊಂದು ಕ್ರಮಬದ್ಧವಾದ ರೀತಿಯಲ್ಲಿ ಹೆಣೆದುಕೊಳ್ಳುವ ಕಲ್ಪನೆಗಳೇ ಕೆಲವೊಮ್ಮೆ ಉತ್ತಮ ಸಾಹಿತ್ಯವಾಗಿಬಿಡುತ್ತದೆ. ನನ್ನ ಬರವಣಿಗೆಗೆ ಬದುಕೇ ಸ್ಫೂರ್ತಿ; ಅದು ನನ್ನದಾಗಿರಬಹುದು ಅಥವಾ ಬೇರೆಯವರದ್ದು!

◆ ನಿಮ್ಮ ಸಾಹಿತ್ಯದಲ್ಲಿ ಅಮೂರ್ತತೆ ದಟ್ಟವಾಗಿ ಕಾಣಿಸುತ್ತದೆ. ಹಲವು ಬಾರಿ ನಿನ್ನೆಯು ಇಂದಾಗಿ ಬದಲಾಗಿರುತ್ತದೆ; ಇಂದು ನಾಳೆಯಾಗಿ ಕರಗಿಹೋಗಿರುತ್ತದೆ. ಹಲವು ಬಾರಿ ನೀವು ಪ್ರಕೃತಿಯ ಕ್ರಿಯೆಗಳನ್ನೇ ಸಮಯವನ್ನು ಸೂಚಿಸುವುದಕ್ಕೆ ಬಳಸುತ್ತೀರಿ. ಉದಾ: ಸೂರ್ಯ ಮೂಡುವುದು, ಎಲೆ ಉದುರುವುದು ಇತ್ಯಾದಿ. ಅಮೂರ್ತತೆಯ ಬಗ್ಗೆ ನಿಮ್ಮ ಸ್ಪಷ್ಟವಾದ ನಿಲುವು ಏನು? ನೀವು ಸಮಯವನ್ನು ಯಾವ ರೀತಿಯಲ್ಲಿ ಗ್ರಹಿಸುತ್ತೀರಿ? ಹೇಗೆ ವಿಶ್ಲೇಷಿಸುತ್ತೀರಿ?

ನನ್ನ ಕೆಲವು ರಚನೆಗಳು ಅಮೂರ್ತತೆಯ ಸುತ್ತವೇ ಸುತ್ತುವುದನ್ನು ನಾನು ಅಲ್ಲಗಳೆಯುವುದಿಲ್ಲ. ಇಂದು